<u>ಸಾಕ್ಷಿಯನ್ನು **16.04.2025** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲು ಎದುರುದಾರರ  ಪರ ಶ್ರೀ ಎ ಆರ್ ವಕೀಲರಿಂದ:</u>

ನಾನು 4 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ.  ಈ ಅರ್ಜಿಯನ್ನು ಜೀವನಾಂಶಕ್ಕಾಗಿ ನನ್ನ ಗಂಡನ ವಿರುದ್ದ ಸಲ್ಲಿಸಿರುತ್ತೇನೆ.  ಈ ಅರ್ಜಿ ಸಲ್ಲಿಸಲು ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಲು ನಾನೇ ಮಾಹಿತಿ ನೀಡಿರುತ್ತೇನೆ. ಎದುರುದಾರರಿಗೆ ಈಗ 62 ವರ್ಷ.  ನನಗೆ 55 ವರ್ಷ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುವುದಿಲ್ಲ.  ನಾನು ಈಗ ಮಕ್ಕಳ ಜೊತೆ ವಾಸವಿದ್ದೇನೆ ಎಂದರೆ ಸರಿ.  ನನ್ನ ಮಕ್ಕಳು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಜೀವನಾಂಶಕ್ಕಾಗಿ ನನ್ನ ಮಕ್ಕಳು ನನ್ನನು್ನ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಐದು ಜನ ಮಕ್ಕಳಿರುತ್ತಾರೆ. ಎದುರುದಾರರಿಗೆ ವಯಸ್ಸಾದ ಕಾರಣ, ನನ್ನ ಮಕ್ಕಳ ಮೇಲೂ ಅರ್ಜಿ ಸಲ್ಲಿಸಬಹುದು ಎಂದರೆ ಸರಿ.  ನನ್ನ ಮಕ್ಕಳ ವಿರುದ್ದವೂ ಜೀವನಾಂಶಕ್ಕಾಗಿ ಪ್ರಕರಣ ದಾಖಲಿಸಲು ನನಗೆ ತೊಂದರೆ ಇಲ್ಲ ಎಂದರೆ ಸಾಕ್ಷಿಯು ತನ್ನ ಮಕ್ಕಳ ಜೀವನ ಹಾಳಾಗುತ್ತದೆ ಎಂದು ನುಡಿಯುತ್ತಾರೆ.  ನನ್ನ ಹೆಣ್ಣು ಮಕ್ಕಳ ಗಂಡನ ಮನೆಯಲ್ಲಿದ್ದು, ನನ್ನ ಮಗನ ಜೀವನ ಹಾಳಾಗಬಾರದೆಂದು  ನಾನು ಮಕ್ಕಳ ವಿರುದ್ಧ ಜೀವನಾಂಶ ಕೇಳುತ್ತಿಲ್ಲವೆಂದು ನುಡಿಯುತ್ತಾರೆ.  ನನ್ನ ಗಂಡನಿಗೆ ವಯಸ್ಸಾಗಿದ್ದರೂ ಮಕ್ಕಳ ವಿರುದ್ದ ಜೀವನಾಂಶ ಕೇಳದೆ ಎದುರುದಾರರಿಗೆ ತೊಂದರೆ ಕೊಡಲು ಈ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

2. ಎದುರುದಾರರು ಎರಡು ವರ್ಷಗಳ ಹಿಂದೆ ನಿವೃತ್ತರಾಗಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಎದುರುದಾರರ ನಿವೃತ್ತಿಯ ಕುರಿತು ಸುತ್ತೋಲೆಯ ದೃಡೀಕೃತ ಪ್ರತಿಯನ್ನು ತೋರಿಸಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿದ ಕಾರಣ, ಅದನ್ನು ನಿಆರ್(1) ಎಂದು ಗುರುತಿಸಲಾಯಿತು. ಸಾಕ್ಷಿಯು ಎದುರುದಾರರು ರೂ.80 ಲಕ್ಷ ನಿವೃತಿ ಹಣ ಪಡೆದಿರುತ್ತಾರೆಂದು ನುಡಿದಿರುತ್ತಾರೆ. ಎದುರುದಾರರು ರೂ.80 ಲಕ್ಷ ಹಣ ಪಡೆದ ಕುರಿತು ದಾಖಲೆಯನ್ನು ಹಾಜರುಪಡಿಸಿಲ್ಲ. ಎದುರುದಾರರಿಗೆ ಈಗ ರೂ.3,945/- ಮಾಸಿಕ ಪಿ ಎಫ್ ಪಿಂಚಣಿ ಬರುತ್ತದೆ ಎಂದರೆ ಸರಿ. ಸಾಕ್ಷಿಗೆ ಎದುರುದಾರರ ಪಿಂಚಣಿಯ ಕುರಿತು ಸುತ್ತೋಲೆಯ ದೃಡೀಕೃತ ಪ್ರತಿಯನ್ನು ತೋರಿಸಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿದ ಕಾರಣ, ಅದನ್ನು ನಿಆರ್.2 ಎಂದು ಗುರುತಿಸಲಾಯಿತು. ಸಾಕ್ಷಿಯು ಎದುರುದಾರರಿಗೆ ಬಾಡಿಗೆ ಹಣ ಬರುತ್ತಿದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ 4 ಪೋಟೋಗಳನ್ನು ತೋರಿಸಿ, ಸದರಿ ಪೋಟೋಗಳಲ್ಲಿ ಎದುರುದಾರರು ಕಂಡು ಬರುತ್ತಾರೆ ಎಂದು ಸೂಚಿಸಲಾಗಿದ್ದು, ಸಾಕ್ಷಿ ಒಪ್ಪಿದ ಕಾರಣ, ಸದರಿ ಪೋಟೋಗಳನ್ನು ನಿಆರ್.3 ರಿಂದ 6 ಎಂದು ಗುರುತಿಸಲಾಯಿತು ಹಾಗೂ ಸದರಿ ಪೋಟೋಗಳ ಎರಡು ಸಿಡಿಗಳನ್ನು ನಿಆರ್.7 ಮತ್ತು 8 ಎಂದು ಗುರುತಿಸಲಾಯಿತು. ನಿಆರ್.3 ರಿಂದ 6 ರಂತೆ ಎದುರುದಾರರಿಗೆ ಎದ್ದು ಓಡಾಡಲು ಆಗುವುದಿಲ್ಲ ಎಂದರೆ ಸಾಕ್ಷಿಯು ಅವರು ಆರೋಗ್ಯವಾಗಿ ಎಲ್ಲೆಡೆ ಓಡಾಡಿಕೊಂಡು ಇರುತ್ತಾರೆ ಎಂದು ನುಡಿಯುತ್ತಾರೆ.

3. ದಿನಾಂಕಃ 10.08.2024 ರಿಂದ ಎದುರುದಾರರಿಗೆ ತಲೆಗೆ ಪೆಟ್ಟಾಗಿ ಇಂದಿಗೂ ಎದ್ದು ಓಡಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಸಾಯುವಂತಿದ್ದರೂ ನಾನು ಮತ್ತು ನನ್ನ ಮಕ್ಕಳ ಅವರ ಯೋಗಕ್ಷೇಮ ನೋಡಿಕೊಳ್ಳುತ್ತಿಲ್ಲ

ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಅವರನ್ನು ನೋಡಲು ಹೋದರೆ ಬೀಗ ಹಾಕಿಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರರು ತಲೆಗೆ ಪೆಟ್ಟಾಗಿರುವ ಕಾರಣ ಓಡಾಡಲು ಆಗುವುದಿಲ್ಲವೆಂದು ನಿಮಾನ್ಸ್ ವೈದ್ಯರು ದಾಖಲೆ ನೀಡಿದ್ದಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯವಾಕಾಶ ಕೋರಿದ್ದು, ಮುಂದೂಡಲಾಯಿತು.

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ

.

ಕುಣಿಗಲ್.